# ನೂರ್ ಜಹಾನ್ ಅವರ ಸಣ್ಣ ಕಥೆಗಳಲ್ಲಿನ ವಸ್ತು ವೈಶಿಷ್ಟ್ಯತೆ

**ವಿಜಯಲಕ್ಷ್ಮಿ ಎನ್.**

ಸಂಶೋಧನಾರ್ಥಿ, ಕನ್ನಡ ಅಧ್ಯಯನ ಕೇಂದ್ರ, ಬೆಂಗಳೂರು ವಿಶ್ವವಿದ್ಯಾಲಯ, ಜ್ಞಾನ ಭಾರತಿ, ಬೆಂಗಳೂರು.

DOI: https://doi.org/10.5281/zenodo.16679488

## ABSTRACT:

ಕಥೆ, ಕವನ, ಕಾದಂಬರಿ ಹೀಗೆ ಭಿನ್ನ ಆಯಾಮಗಳ ಸಾಹಿತ್ಯ ಪ್ರಕಾರಗಳಲ್ಲಿ ರೂಪುಗೊಂಡಿರುವ ನೂರ್ ಜಹಾನ್ ಅವರ 6ನೆಯ ಪುಸ್ತಕವಾದ "ಪರಿವರ್ತನೆ" ಕಥಾ ಸಂಕಲನವು ತನ್ನ ಒಡಲಲ್ಲಿ ಹತ್ತು ಕಥೆಗಳನ್ನು ಇರಿಸಿಕೊಂಡಿದ್ದು, ಪ್ರತಿಯೊಂದು ಕಥೆಯು ವಿಭಿನ್ನ ವಸ್ತು ವಿಷಯಗಳನ್ನು ಒಳಗೊಂಡಿರುವ ವೈವಿಧ್ಯಮಯ ಕಥಾ ಗುಚ್ಛವನ್ನು ಕಾಣಬಹುದು. ಈ ಎಲ್ಲಾ ಕಥೆಗಳು ಮನುಷ್ಯನ ಬದುಕಿಗೆ ಪ್ರಾಮುಖ್ಯತೆ ನೀಡುವ ಮತ್ತು ಬದುಕಿನ ಸವಾಲುಗಳಿಗೆ ಎದೆಗುಂದದೆ ಮುನ್ನಡೆಯುವ, ಜೀವನುತ್ಸಾಹದ ಬದುಕೇ ಅರ್ಥಪೂರ್ಣವಾದ ಅರಿವು ಎಂಬುದನ್ನು ಮನದಟ್ಟು ಮಾಡುವ ಕಡೆಗೆ ರಚಿತವಾಗಿವೆ.

ಕುಟುಂಬದೊಳಗಿನ ಸಂಬಂಧ, ಸ್ನೇಹಪರತೆ, ಗಂಡ–ಹೆಂಡತಿಯ ನಡುವೆ ಇರಬೇಕಾದ ಅನ್ಯೋನ್ಯತೆ, ಆಸ್ತಿ ವಿಚಾರದಲ್ಲಿನ ಒಡಕು, ಪರಿಸ್ಥಿತಿಗಳ ಒಡೆತಕ್ಕೆ ಸಿಲುಕಿ ನಲುಗಿದ ಮನಸ್ಸುಗಳು, ಇತರರ ಸಂತೋಷದಲ್ಲಿ ನೋವನ್ನು ಮರೆಯುವ ಸಾರ್ಥಕತೆ, ಮತ್ತೊಬ್ಬರ ಕಷ್ಟಕ್ಕೆ ಸ್ಪಂದಿಸುವ ಮಾನವೀಯತೆ ಹೀಗೆ ಹಲವು ವಿಷಯಗಳ ಮೂಲಕ ಮೈತಳೆದಿರುವ ಈ ಕಥಾ ಸಂಕಲನ ಓದುಗರನ್ನು ಮತ್ತಷ್ಟು ಆಳಕ್ಕಿಳಿಸಿ ಓದಿಸಿಕೊಳ್ಳುವ ಕೃತಿಯಾಗಿದೆ.

## KEYWORDS:

ಕೋಮುಗಲಭೆ, ಪತ್ರಕರ್ತ, ಆಂಬ್ಯುಲೆನ್ಸ್, ಕೌನ್ಸೆಲಿಂಗ್, ಆಸ್ಪತ್ರೆ, ಪುಣ್ಯಸ್ಥಳ, ಉಮ್ರಾ ಯಾತ್ರೆ, ಕೊನೆಯ ಆಸೆ.

ಈ ಕಥಾ ಸಂಕಲನದ ಮೊದಲ ಕಥೆಯಾದ 'ಪುಣ್ಯ' ಕಥೆಯು ತಾನು ಬದುಕಿದರೆ ಸಾಕು ಎಂಬ ಸ್ವಾರ್ಥವೇ ಮುಖ್ಯವಾಗಿರುವ ಈ ಕಾಲಘಟ್ಟದಲ್ಲಿ ಮನುಷ್ಯನಿಗೆ ಕುಟುಂಬ ಸಂಬಂಧಗಳು ಎಷ್ಟು ಮುಖ್ಯವೋ ಅಷ್ಟೇ ಸ್ನೇಹ ಸಂಬಂಧವು ಮುಖ್ಯ ಎಂಬುದನ್ನು ಪ್ರತಿಪಾದಿಸುವ ಈ ಕಥೆಯು ಸ್ನೇಹಿತರ ನಡುವಿನ ಅನ್ಯೋನ್ಯತೆಯನ್ನು, ಮತ್ತೊಬ್ಬರ ಕಷ್ಟಕ್ಕೆ ನೆರವಾಗಿ ನಿಲ್ಲುವ ಮನುಷ್ಯತ್ವವನ್ನು ಎತ್ತಿ ಹಿಡಿದಿದೆ. ವಾಸ್ತವದಲ್ಲಿ 'ಪುಣ್ಯ' ಯಾವುದು ಎಂಬುದರ ನಿಜಾರ್ಥವನ್ನು ಸಾರುವ ಕಥೆಯಾಗಿದೆ. ಪುಣ್ಯಸ್ಥಳ ಸುತ್ತುವುದಕ್ಕಿಂತಲೂ ಸಹಾಯ ಮಾಡುವುದರಲ್ಲಿಯೇ ಹೆಚ್ಚು ಪುಣ್ಯ ಇರುತ್ತೆ ಅನ್ನೋ ಆಶಯವನ್ನು ಈ ಕಥೆಯಿಂದ ತಿಳಿಯಬಹುದಾಗಿದೆ.

ಹಣ ಅಂತಸ್ತಿನ ಅಂತರವಿಲ್ಲದೆ, ಸ್ನೇಹದಿಂದ ಜತೆಯಾಗಿರುವ ಉಸ್ಮಾನ್‌ಸಾಬ್, ರಹ್ಮಾನ್‌ಸಾಬ್ ಮತ್ತು ಸತ್ತರ್‌ಸಾಬ್ ಮೂರು ಜನ ತಮ್ಮ ಜೀವನದ ಬಹುಪಾಲು ಪಯಣವನ್ನು ಮುಗಿಸಿ ಕೊನೆಯ ಕಾಲಘಟ್ಟಕ್ಕೆ ಬಂದು ನಿಂತಿರುತ್ತಾರೆ. ಈ ಮೂರು ಜನರ ಕೊನೆಯ ಆಸೆ ಉಮ್ರಾ ಯಾತ್ರೆಗೆ ಹೋಗಿ ಪುಣ್ಯ ಸಂಪಾದಿಸುವುದಾಗಿರುತ್ತದೆ. ಮಕ್ಕಳಿಲ್ಲದ ಸತ್ತರ್‌ಸಾಬ್, ಮಸ್ತಾನ್‌ಸಾಬ್‌ರವರ ಮಗಳ ಮದುವೆ ನಿಂತು ಹೋಗುವ ಸಂದರ್ಭದಲ್ಲಿ ತನ್ನ ಉಮ್ರಾ ಯಾತ್ರೆ ನಿಂತು ಹೋದರು ಪರವಾಗಿಲ್ಲ, ಒಂದು ಹೆಣ್ಣು ಮಗುವಿನ ಜೀವನ ಹಾಳಾಗಬಾರದು ಎಂದು ಅವರ ಸಹಾಯಕ್ಕೆ ನಿಂತ ಅವರ ಪಾತ್ರ ಗಮನಾರ್ಹವಾದದ್ದು. ಸತ್ತರ್‌ಸಾಬ್, ತಾನು ಯಾತ್ರೆಗೆಂದು ಕೂಡಿಟ್ಟ ಹಣವನ್ನು ಮದುವೆಗೆಂದು ಕೊಡಲು ಮುಂದಾದ ವೇಳೆ ಮಸ್ತಾನ್ ಸಾಬ್ ತೆಗೆದುಕೊಳ್ಳಲು ಹಿಂಜರಿಯುತ್ತಾರೆ. ಉಮ್ರಾ ಯಾತ್ರೆಗೆಂದು ಕೂಡಿಟ್ಟಿರುವ ಹಣವನ್ನು ತನ್ನ ಮಗಳ ಮದುವೆಗೆ ಬೇಡವೆಂದ ಮಸ್ತಾನ್ ಸಾಬ್ ಅವರನ್ನು ಸಮಾಧಾನಿಸುತ್ತಾ "ನಿಮ್ಮ ಮಾನ ಪ್ರಾಣ ಉಳಿಸುವುದಕ್ಕಿಂತಲೂ ಹೆಚ್ಚಿನದೇ..? ನನ್ನ ಉಮ್ರಾ ಯಾತ್ರೆ" ಎಂದೇಳುತ್ತಾ ನಿಂತು ಹೋಗಬೇಕಿದ್ದ ಮದುವೆಯನ್ನು ನಡೆಸಿಕೊಟ್ಟ ಸತ್ತರಸಾಬ್ ಅವರ ಮೂಲಕ ಮಾನವೀಯತೆಯನ್ನು ಮೀರಿದ ಧರ್ಮವಿಲ್ಲ ಎಂಬುದನ್ನು ಲೇಖಕಿಯು ಓದುಗರಿಗೆ ಈ ಕಥೆಯ ಮೂಲಕ ಸಂದೇಶ ನೀಡಿದ್ದಾರೆ.

ಹಣ ಕಡಿಮೆ ಇರುವ ಕಾರಣ ನಾನು ಯಾತ್ರೆಗೆ ಬರಲಾಗದು ಎಂದು ತಿಳಿಸಿದ ಸತ್ತರ್ ಸಾಬ್‌ನನ್ನು ಕುರಿತು ಅವರ ಸ್ನೇಹಿತರು "ಇಲ್ಲಿ ನನ್ನದು ನಿನ್ನದು ಅಂತ ಯಾವುದೂ ಇಲ್ಲ. ನಮ್ಮ ಮೂರು ಜನರ ಬಳಿ ಇರುವ ಹಣವನ್ನು ಸೇರಿಸಿ ಉಮ್ರಾ ಯಾತ್ರೆಗೆ ಹೋಗೋಣ" ಎಂದು ಸ್ನೇಹಿತರು ಜೊತೆಗೂಡಿ ನಿಲ್ಲುವ ನೈತಿಕ ಬೆಂಬಲವನ್ನು ಕಥೆಯು ವ್ಯಕ್ತಪಡಿಸಿದೆ. ಈ ಕಥೆಯ ಮೂಲಕ ಪುಣ್ಯ ಎಂಬುದು ಮಾಡುವ ಕೆಲಸದಲ್ಲಿ ಇರುತ್ತದೆ ಎಂಬುದನ್ನು ತುಂಬಾ ಸ್ಪಷ್ಟವಾಗಿ ಕಟ್ಟಿಕೊಟ್ಟಿರುವುದು ಅರ್ಥಪೂರ್ಣವಾಗಿದೆ.

ನನಸಾದ ಕನಸು ಕಥೆಯಲ್ಲಿನ ಅನಾಥ ಬಾಲಕನಾದ ಮುಗ್ಧ ಮನಸ್ಸಿನ ರಾಮು ಎಂಬ ಹುಡುಗನ ಕನಸಿನ ಮೂಲಕ ಕಥೆ ತೆರೆದುಕೊಳ್ಳುತ್ತಾ ಹೋಗುತ್ತದೆ. ಸ್ವಾತಂತ್ರ್ಯ ಪೂರ್ವ ಮತ್ತು ಸ್ವಾತಂತ್ರ್ಯ ನಂತರದ ಪ್ರಭಾವಿ ವ್ಯಕ್ತಿಗಳ ವಿಚಾರಧಾರೆಯನ್ನು ಚರ್ಚಿಸುತ್ತಾ ಹಿರಿಯರ ಚಿಂತನೆಗಳನ್ನು ಮತ್ತು ಅವರ ಕಾಳಜಿಯನ್ನು ಅರ್ಥೈಸುವಲ್ಲಿ ಯಶಸ್ವಿಯಾಗಿದ್ದಾರೆ. "ಈ ಜಗತ್ತಿನ ಜನರು ಎಷ್ಟು ಓದಿದ್ದರೂ ಪ್ರಜ್ಞಾವಂತಿಕೆ ಬೆಳೆಯಲಿಲ್ಲ. ಚಿಂತಕರು, ಮಾರ್ಗದರ್ಶಕರು ಎಂದು ಹೇಳಿಕೊಳ್ಳುವವರೇ ಜನರನ್ನು ಹೆಚ್ಚು ದಾರಿ ತಪ್ಪಿಸುತ್ತಿದ್ದಾರೆ. ನಾನು ಒಂದು ಜಾತಿಗೆ ಸೀಮಿತನಾದವನಲ್ಲ. ರಾಜ ಎಂದರೆ ಎಲ್ಲಾ ಸಮುದಾಯದ ಜನರಿಗೂ ಸೇರಿದವನಾಗಿರುತ್ತಾನೆ. ಎಲ್ಲಾ ಜಾತಿಯ ಜನರಿಗೂ ಸೇರಿದವನಾದರೂ ನನ್ನನ್ನು ಒಂದು ಜಾತಿ ದೃಷ್ಟಿಕೋನಕ್ಕೆ ಸೀಮಿತಗೊಳಿಸಿ ನೋಡುವುದು ನನ್ನ ವಿಶಾಲ ನಾಯಕತ್ವಕ್ಕೆ ಮಾಡುವ ಅಪಮಾನ" ಎಂದು ತನ್ನ ಅಳಲನ್ನು ತೋಡಿಕೊಳ್ಳುವ ಚಿತ್ರದುರ್ಗದ ಮಹಾರಾಜ ಮದಕರಿ ನಾಯಕನ ಕಥೆ ಐತಿಹಾಸಿಕವಾದ ವ್ಯಕ್ತಿಗಳನ್ನು ಒಂದು ಜಾತಿಗೆ ಸೀಮಿತ ಮಾಡಿಕೊಂಡಿರುವ ಸಮಕಾಲೀನ ಸ್ಥಿತಿಯನ್ನು ಎತ್ತಿ ತೋರಿಸುತ್ತಿದೆ.

"ನನ್ನ ರಾಜ್ಯದಲ್ಲಿ ಹಿಂದೂ ಮತ್ತು ಮುಸ್ಲಿಂ ಪ್ರಜೆಗಳು ಇದ್ದರು. ಇಬ್ಬರೂ ನನ್ನ ಪ್ರಜೆಗಳೇ, ಎಲ್ಲರನ್ನು ಮಕ್ಕಳಂತೆ ನೋಡಿಕೊಂಡಿದ್ದೆ. ನನ್ನ ಆಡಳಿತದಲ್ಲಿಯೂ ಮತ್ತು ಸೈನ್ಯದಲ್ಲಿಯೂ ಹಿಂದೂ ಅಧಿಕಾರಿಗಳು, ಸೈನಿಕರಿದ್ದರೂ ಜನ ನನ್ನನ್ನು ಹಿಂದೂ ವಿರೋಧಿ ಎಂದು ಬಿಂಬಿಸುತ್ತಿದ್ದಾರೆ. ನಾನು ಮತ್ತು ನನ್ನ ತಂದೆ ಮಾಡಿದ ಅಭಿವೃದ್ಧಿಯ ಕೆಲಸಗಳು ನೂರಾರಿವೆ. ಅಂತಹ ಕೆಲಸಗಳು ಧರ್ಮಾದಾರಿತವಾಗದೆ ಸಾರ್ವಜನಿಕರ ಉಪಯೋಗವನ್ನೇ ಮನದಲ್ಲಿಟ್ಟುಕೊಂಡು ಮಾಡಿದ್ದೇವೆ. ಜನರು ಅವುಗಳ ಕುರಿತು ಯಾಕೆ ನೆನೆಸುವುದು ಇಲ್ಲ ಎಂಬುದು ಅರ್ಥವಾಗುತ್ತಿಲ್ಲ" ಎಂದು ಮರುಗುವ ಟಿಪ್ಪು ಸುಲ್ತಾನ್ನ ಮೂಲಕ ಈ ಕಥೆಯಲ್ಲಿ, ಅವರ ಅಭಿವೃದ್ಧಿಯನ್ನು, ಆಡಳಿತದ ನೈಜತೆಯನ್ನು, ಅವನ ದೇಶಪ್ರೇಮವನ್ನು ಮರೆತು ಧರ್ಮಕ್ಕೆ ಸೀಮಿತ ಮಾಡಿ ನೋಡುವ ಸಮಕಾಲೀನ ಕೋಮು ಕಣ್ಣೋಟವನ್ನು ಪ್ರಶ್ನಿಸುವಂತಿದೆ. ಪ್ರಸ್ತುತ ಕಾಲಘಟ್ಟದ ಟಿಪ್ಪು ಬಗೆಗಿನ ಅಷ್ಟು ಚರ್ಚೆಗಳನ್ನು ಒಮ್ಮೆಲೇ ನಮ್ಮ ಕಣ್ಣಮುಂದೆ ತಂದು ನಿಲ್ಲಿಸುತ್ತೆ. ರಾಜ ಪ್ರಭುತ್ವದ ಆಡಳಿತದಲ್ಲಿ ತಪ್ಪು ಸರಿ ಸಹಜ. ಬಹುತೇಕವಾಗಿ ಟಿಪ್ಪು ಮಾಡಿರುವ ಒಳ್ಳೆ ಕೆಲಸಗಳನ್ನು, ಜನಪರ ನಿಲುವುಗಳನ್ನು ಧಾರ್ಮಿಕ ಕಣ್ಣೋಟದಿಂದ ನೋಡಬಾರದು ಎಂಬುದನ್ನು ಅವರು ಕಟ್ಟಿಕೊಟ್ಟಿದ್ದಾರೆ.

"ನನ್ನ ಜೀವನುದ್ದಕ್ಕೂ ಅಹಿಂಸೆಯನ್ನು ಪ್ರತಿಪಾದಿಸಿದ ನಾನು, ಯಾರನ್ನು ಹಿಂಸಿಸಲಿಲ್ಲ, ನೋಯಿಸಲಿಲ್ಲ ಆದರೂ, ನನ್ನನ್ನು ಹಿಂಸೆಯಿಂದ ಕೊಂದರೂ ಪರವಾಗಿಲ್ಲ ಎಂದುಕೊಂಡೆ. ಈ ಕಾರಣಕ್ಕೆ ನನ್ನ ಜನರು ಹಿಂಸೆಯ ದಾರಿಯನ್ನು ಬಿಟ್ಟು ಬಿಟ್ಟಿದ್ದರೆ ನನ್ನ ಮರಣಕ್ಕೂ ಒಂದು ಅರ್ಥ ಬರುತ್ತಿತ್ತು. ಜನರು ಹಾಗೆ

ಮಾಡಲಿಲ್ಲ. ಬುದ್ಧಿ ಇಲ್ಲದವರ ಮಾತನ್ನು ಕೇಳಿಕೊಂಡು ಜನರು ಹಿಂಸೆಯ ದಾರಿ ಹಿಡಿದು ಬಿಟ್ಟಿದ್ದಾರೆ. ಲೇಖಕರು, ಪತ್ರಕರ್ತರಾದ ಗೌರಿ, ಪನ್ಸಾರೆ, ಕಲಬುರ್ಗಿ, ದಾಬೋಲ್ಕರ್ ಅವರನ್ನೂ ನನ್ನನ್ನು ಕೊಂದ ರೀತಿಯಲ್ಲಿಯೇ ಕೊಂದರು. ನಾನು ಕುಡಿತವನ್ನು ಕಠಿಣವಾಗಿ ವಿರೋಧಿಸಿದೆ. ಹಾಗಿದ್ದರೂ, ಜನರು ಪಾನಮತ್ತರಾಗಿ ಹೆಣ್ಣು ಮಕ್ಕಳ ಮಾನ ಪ್ರಾಣವನ್ನು ತೆಗೆಯುವ ಮಟ್ಟಕ್ಕಿಳಿದು ಬಿಟ್ಟಿದ್ದಾರೆ. ಇಂತಹ ಜನರಿಗಾಗಿಯೇ ನಾನು ಸ್ವಾತಂತ್ರ್ಯಕ್ಕಾಗಿ ಹೋರಾಡಿ ನನ್ನ ಪ್ರಾಣ ಕಳೆದು ಕೊಂಡಿದ್ದು, ಇವರಿಗೇನಾ ನಾನು ಅಹಿಂಸಾ ತತ್ವ ಬೋಧಿಸಿದ್ದು ಎಂಬುದನ್ನು ನೆನೆಸಿಕೊಂಡರೆ, ಮನಸ್ಸಿಗೆ ತುಂಬಾ ನೋವಾಗುತ್ತದೆ'' ಎಂದು ಕಣ್ಣೀರಿಡುವ ಗಾಂಧಿ ಅಂತಿಮವಾಗಿ ಹಿಂಸೆಯ ದಾರಿಯನ್ನು ತೊರೆದು ಅಹಿಂಸೆಯ ಮಾರ್ಗದಲ್ಲಿ ನಡೆದು ಯಾರನ್ನು ಹಿಂಸಿಸದೇ ಯಾರನ್ನು ಕೊಲ್ಲದೇ ಒಳ್ಳೆಯ ಮನುಷ್ಯರಾಗಿ ಬಾಳಿ ಎಂದು ಸಂದೇಶ ಸಾರುವ ಈ ಕಥೆಯು ಪ್ರಸ್ತುತ ವಿಕೃತವಾಗುತ್ತಿರುವ ಕೋಮುವಾದ, ಮತೀಯವಾದದ ಚಿತ್ರಣವನ್ನು ಅನಾವರಣಗೊಳಿಸುತ್ತದೆ. ಗೌರಿ, ಕಲ್ಬುರ್ಗಿಯಂತಹ ಸಮಕಾಲೀನ ಚಿಂತಕರನ್ನು ಕೊಂದಿರುವ ಇವತ್ತಿನ ಸ್ಥಿತಿಯು ಮುಂದೆ ಇನ್ನು ದೊಡ್ಡ ಅಪಾಯದ ಸ್ಥಿತಿಯನ್ನು ತಂದೊಡ್ಡಬಹುದು ಎಂಬ ಎಚ್ಚರಿಕೆಯನ್ನು ನೀಡುತ್ತಾ ಅಂತಿಮವಾಗಿ ಹಿಂಸೆಯನ್ನು ತೊರೆದು ಗಾಂಧಿ ಬೋಧಿಸಿದ ಶಾಂತಿಯುತ ಸಮಾಜದ ನಿರ್ಮಾಣದ ಬಗ್ಗೆ ಈ ಕತೆ ಬೆಳಕು ಚೆಲ್ಲುತ್ತದೆ.

''ನಾನು ಹಿಂದೂ ವಿರೋಧಿಯಲ್ಲ. ನನ್ನ ಆಡಳಿತದಲ್ಲಿ ಜನ ಸೌಹಾರ್ದತೆಯಿಂದ ಕೂಡಿ ಬದುಕಲು ಪ್ರಯತ್ನಿಸಿದ್ದೇನೆ. ಆ ಕಾಲಕ್ಕೇ ನಾನು ಬಹುತ್ವ ಭಾರತವನ್ನು ಪ್ರೀತಿಸಿದೆ. ಹಿಂದೂ-ಮುಸ್ಲಿಂ ಏಕತೆಯನ್ನು ಸಾರುವ ಮೊಹರಂ ಹಬ್ಬವನ್ನು ಆಚರಣೆಗೆ ತಂದವರಲ್ಲಿ ನಾನೇ ಮೊದಲಿಗ. ಈ ಹಬ್ಬದ ಮೂಲಕ ಹಿಂದೂ ಮತ್ತು ಮುಸ್ಲಿಂ ಬಾಂಧವರು ಒಗ್ಗೂಡಿ ಸಂಭ್ರಮಿಸುವ ಸಂಪ್ರದಾಯವನ್ನು ರೂಢಿಸಿಕೊಂಡಿದ್ದಾರೆ. ಈ ಮೂಲಕ ಸಮಾಜದಲ್ಲಿ ಶಾಂತಿ ಕಾಪಾಡಲು ಪ್ರಯತ್ನಿಸಿದರೂ, ಕೆಲವರು ನನ್ನನ್ನು ಹಿಂದೂ ವಿರೋಧಿಯಾಗಿ ಟೀಕೆ ಮಾಡುವರು'' ಎಂದು ಕೊರಗುವ ಅಕ್ಬರ್ ಪಾತ್ರದ ಮೂಲಕ ಲೇಖಕಿಯು ವಾಸ್ತವ ಚರಿತ್ರೆಯನ್ನು ತಿರುಚುವ ಮತ್ತು ಕೋಮುವಾದಿ ಎಳೆಗಳನ್ನು ಸೂಕ್ಷ್ಮವಾಗಿ ಪ್ರತಿಬಿಂಬಿಸಿದ್ದಾರೆ. ಗತ ಕಾಲದ ಸತ್ಯಗಳನ್ನು ಪ್ರಚಲಿತದಲ್ಲಿ ಪ್ರಕಾಶಮಾನಗೊಳ್ಳಲು ಬಿಡದ ಸಂಪ್ರದಾಯವಾದಿಗಳ ಪ್ರಯತ್ನವನ್ನು ಲೇಖಕಿಯು ಕಥೆಯಲ್ಲಿ ಸೂಕ್ಷ್ಮ ವಿಮರ್ಶೆಯನ್ನು ಮಾಡಿದ್ದಾರೆ.

''ಮನುಷ್ಯ ಬದುಕಿನಲ್ಲಿ ಭೇದ ಅಳಿಸಿ ಮಾನವೀಯ ಸಮಾಜ ನಿರ್ಮಾಣ ಮಾಡಲು ವಚನ ಸಾಹಿತ್ಯ, ಅನುಭವ ಮಂಟಪ ಮೂಲಕ ಸಾಕಷ್ಟು ಪ್ರಯತ್ನಿಸಿದ ನಾನು 'ಇವನಾರವ ಇವನಾರವ ಎಂದೆನಿಸದಿರಯ್ಯ, ಇವ ನಮ್ಮವ ಇವ ನಮ್ಮವ

ಎಂದೆನಿಸಯ್ಯ' ಎಂದು ಸಾರಿದ್ದೆ. ಈ ತತ್ವಗಳನ್ನು ಇಂದು ಗಾಳಿಗೆ ತೂರಿ, ನನ್ನನ್ನೇ ನಮ್ಮವ ನಮ್ಮವ ಎಂದು ಇತರರ ಜಾತಿಗೆ ಬೇರೆ ಬೇರೆ ಧರ್ಮಕ್ಕೆ ಸೇರಿಸುತ್ತಿದ್ದಾರೆ. ಮೇಲು ಕೀಳಿನ ಬೇರನ್ನು ಸಾಂಸ್ಕೃತಿಕವಾಗಿಯೇ ಕಿತ್ತೆಸೆಯುವ ಮೂಲಕ, ಅಂತರ್ ಜಾತಿ ಮದುವೆ ಮಾಡಿಸುವ ಮೂಲಕ ಕ್ರಾಂತಿಯನ್ನು ಮಾಡಿದ್ದನ್ನೇ ಮರೆತು, ನನ್ನನ್ನು ಒಂದು ಜಾತಿಗೆ ಸೀಮಿತವಾಗಿಸಿದ್ದು ನನ್ನ ಅತೀವ ದುಃಖಕ್ಕೆ ಕಾರಣವಾಗಿದೆ. ನಾನು ಹೇಳಿದ ಪೂಜೆಯೇ ಬೇರೆ, ಜನರು ಅರ್ಥ ಮಾಡಿಕೊಂಡ ರೀತಿಯೇ ಬೇರೆ'' ಎಂದು ಕಳವಳಗೊಳ್ಳುವ ಬಸವಣ್ಣ ನವರ ಅಂತರಂಗದ ಸುದ್ದಿ ಇಲ್ಲಿ ಮರುಕಳಿಸುತ್ತದೆ. ಶರಣ ಬಸವಣ್ಣನವರ ಅಂದಿನ ಕಾಲಘಟ್ಟದ ಕಠಿಣವಾದ ಸಂಪ್ರದಾಯಿಕ ಕಾಲದಲ್ಲಿ ರಾಜರ ಆಡಳಿತದ ದೌರ್ಜನ್ಯ, ಜಾತಿಯತೆ, ಲಿಂಗ ಅಸಮಾನತೆಯನ್ನು ಪ್ರಶ್ನಿಸಿ ಕ್ರಾಂತಿ ಮಾಡಿದರು. ಸಾವಿರಾರು ವರ್ಷಗಳು ಮುಂದುವರಿದಿರುವ ಇಂದಿನ ಸಮೂಹ ಬಹಳಷ್ಟು ತಾಂತ್ರಿಕವಾಗಿ, ವೈಜ್ಞಾನಿಕವಾಗಿ ಪ್ರಜ್ಞಾವಂತರಾಗಿದ್ದರೂ ಜಾತಿ, ಲಿಂಗ, ಧರ್ಮದ ಸಂಕೋಲೆಗಳಲ್ಲಿಯೇ ಬಂಧಿಯಾಗಿರುವುದು, ಭವಿಷ್ಯದಲ್ಲಿ ಸಮಾಜ ಬದಲಾಗುವುದಿಲ್ಲವೇನೋ ಎಂಬ ಆತಂಕವನ್ನು ಈ ಕತೆಯು ವ್ಯಕ್ತಪಡಿಸುತ್ತದೆ.

''ಸರ್ವರಿಗೂ ಸಮಬಾಳು, ಸಮತೆ, ಸಮಾನತೆ, ಸಹೋದರತ್ವ, ಜಾತ್ಯಾತೀತ, ಧರ್ಮನಿರಪೇಕ್ಷ ತತ್ವಗಳನ್ನು ಬೋಧಿಸಿದ ಸಂವಿಧಾನವನ್ನು ಅರ್ಥ ಮಾಡಿಕೊಳ್ಳುವಲ್ಲಿ ಸೋತಿದ್ದಾರೆ. ಸಂವಿಧಾನದ ಆಶಯಗಳನ್ನೇ ಬುಡಮೇಲು ಮಾಡುತ್ತಾ, ಅದನ್ನು ಸುಡುವ ಪ್ರಯತ್ನವನ್ನೂ ಮಾಡುತ್ತಿರುವುದು ನೋವಿನ ಸಂಗತಿ'' ಎಂದು ನೊಂದುಕೊಳ್ಳುವ ಅಂಬೇಡ್ಕರ್ ಅವರ ನೋವಿನ ಗಳಿಗೆಯನ್ನು ನಾವಿಲ್ಲಿ ಕಾಣಬಹುದು. ಇಲ್ಲಿ ನಾವು ನೋಡುವ ನೋವು ಕೇವಲ ಅಂಬೇಡ್ಕರ್‌ಗೆ ಸೀಮಿತಗೊಳ್ಳುವ ನೋವಲ್ಲ, ಸಮ ಸಮಾಜ ಕಟ್ಟಲು ಪ್ರಯತ್ನಿಸುವ ಎಲ್ಲರ ನೋವಾಗಿದೆ. ಸಂವಿಧಾನ ಆಶಯಗಳ ಮೂಲಕ ಸಮಾಜದಲ್ಲಿ ತಾರತಮ್ಯ, ದೌರ್ಜನ್ಯ ಅಳಿಸಿ ಸಾಮಾಜಿಕ ನ್ಯಾಯದಡಿ ಬದುಕುವ ಅವಕಾಶವಿದ್ದರೂ, ಕೆಲವರ ಕಾರಣಗಳಿಂದ ಅಶಾಂತಿ ವಾತಾವರಣ ಉಂಟಾಗುತ್ತಿದೆ. ಜಾತ್ಯಾತೀತ, ಪ್ರಜಾತಂತ್ರ, ಸಾರ್ವಭೌಮ, ಸಮಾಜವಾದಿ ತತ್ವಗಳೆಲ್ಲವೂ ಬುಡಮೇಲು ಆಗುವ ಮೂಲಕ ದೇಶವು ಮತ್ತೆ ದಿವಾಳಿಯಂಚಿಗೆ ತಂದು ನಿಲ್ಲುತ್ತಿದೆ ಎಂಬುದನ್ನು ಈ ಕಥೆಯ ಮೂಲಕ ನೂರ್ ಜಹಾನ್ ಅವರು ಸೂಕ್ಷ್ಮವಾಗಿ ಬಿಡಿಸಿಕೊಟ್ಟಿದ್ದು, ಜನರನ್ನು ಸಂವಿಧಾನದ ಕಡೆಗೆ ನಡೆಯುವಂತೆ ಸೂಚಿಸಿದ್ದಾರೆ.

ಪರಿವರ್ತನೆ ಕಥೆಯು ಮಾನಸಿಕ ಆಸ್ಪತ್ರೆಯಲ್ಲಿ ಚಿಕಿತ್ಸೆಗಾಗಿ ಬರುವ ರೋಗಿಗಳ ಸಮಸ್ಯೆಯ ಮೂಲಕ ಸಮಾಜದೊಳಗೆ ಬದಲಾಗುತ್ತಿರುವ ಮನಸ್ಥಿತಿ ಮತ್ತು ಪರಿಸ್ಥಿತಿಗಳ ಕುರಿತು ಚರ್ಚಿಸಿದ್ದಾರೆ. ಎಸೆಸೆಲ್ಸಿಯನ್ನಷ್ಟೇ ಓದಿ, ಮದುವೆಯಾಗಿ ಮಕ್ಕಳನ್ನು ಪಡೆಯುವ ಮೊದಲೇ, ಸಣ್ಣ ವಯಸ್ಸಿನಲ್ಲೇ ಗಂಡನನ್ನು ಕಳೆದುಕೊಂಡು

“ತನ್ನ ಬದುಕು ಕತ್ತಲಾಯಿತಲ್ಲಾ” ಎಂದು ಕೊರಗದೇ, ಕೈಕಟ್ಟಿ ಕೂರದೇ ಕುಟುಂಬದವರಿಗೆ ಆರ್ಥಿಕವಾಗಿ ಹೊರೆಯಾಗದೇ ಸಣ್ಣಪುಟ್ಟ ಕೆಲಸ ಮಾಡುತ್ತಲೇ ಬಿಎ ಪದವಿ ಕಟ್ಟಿಕೊಂಡು, ನಂತರ ಎಂಎ ಮಾಡಿಕೊಳ್ಳುತ್ತಲೇ, ಅದರ ಜೊತೆಗೆ ಮಹಿಳಾ ಅಧ್ಯಯನ ಡಿಪ್ಲೊಮೋ ಮಾಡಿ ಬಳ್ಳಾರಿ ನಗರದ ಅತಿದೊಡ್ಡ ಮಾನಸಿಕ ಆಸ್ಪತ್ರೆಯಲ್ಲಿ ಕೌನ್ಸೆಲರ್ ಆಗಿ ಕೆಲಸ ಮಾಡುತ್ತಿರುವ ರೇಶ್ಮಾ, ಕತ್ತಲಲ್ಲಿನ ಮನಸ್ಸು ಮತ್ತು ಬದುಕುಗಳನ್ನು ಬೆಳಕಿಗೆ ತರುವ ಪ್ರಯತ್ನ ಹಾಗೂ ಅಸಹಾಯಕ ಸಂದರ್ಭದಲ್ಲಿ ಮಹಿಳೆ ಅದನ್ನು ಮೀರಿ ತನ್ನ ಬದುಕನ್ನಷ್ಟೇ ಕಟ್ಟಿಕೊಳ್ಳದೇ ಇತರರ ಬದುಕಿನಲ್ಲಿ ಬೆಳಕಾಗುವ ಅವಳ ನಿಲುವನ್ನು ಕಟ್ಟಿಕೊಟ್ಟಿದ್ದಾರೆ.

ಈ ಕಥಾ ಸಂಕಲನದಲ್ಲಿ ನೂರ್ ಜಹಾನ್ ಅವರು ಕೌನ್ಸೆಲಿಂಗ್ ಪರಿಭಾಷೆಯ ಮೂಲಕ ಸಮಾಜ ಮತ್ತು ಕುಟುಂಬದೊಳಗಿನ ಎಡರು–ತೊಡರುಗಳನ್ನು ಬಹಳ ಸೂಕ್ಷ್ಮವಾಗಿ ಬಿಡಿಸಿಕೊಟ್ಟಿದ್ದಾರೆ. ಈ ಕಥೆಯಲ್ಲಿ ಬರುವ ರಾಜುವಿನ ಮಾನಸಿಕ ಸಮಸ್ಯೆ ಇಂದಿನ ಹದಿಹರೆಯದ ಯುವ ಪೀಳಿಗೆಯ ಹಾದಿ ತಪ್ಪುತ್ತಿರುವುದರ ತಲ್ಲಣಗಳ ಕುರಿತು ಚರ್ಚಿಸಿದೆ. ಸಮಾಜದಲ್ಲಿ ಹೆಣ್ಣು ಗಂಡಿಗೆ ಕೇವಲ ದೇಹವಷ್ಟೇ. “ಅಕ್ಕ, ತಂಗಿ, ತಾಯಿಯಾದರೂ ಅವರನ್ನು ಭೋಗಿಸಬಹುದು” ಎಂದು ಈ ಕಥೆಯಲ್ಲಿ ಹೇಳುವ ಸ್ನೇಹಿತರ ನಡೆಯನ್ನು ದೇಶದ ಭವಿಷ್ಯದ ಯುವಪೀಳಿಗೆ ಹೇಗೆ ದಾರಿ ತಪ್ಪುತ್ತಿದ್ದಾರೆ ಎಂಬುದಕ್ಕೆ ಕನ್ನಡಿ ಹಿಡಿದಂತೆ ಕಟ್ಟಿಕೊಟ್ಟಿದ್ದಾರೆ.

ಹೆಂಡತಿಯ ಜೊತೆಗಿನ ಜಗಳ, ಮುನಿಸಿನ ಕಾರಣಕ್ಕೆ ಕುಡಿತಕ್ಕೆ ಶರಣಾಗಿದ್ದ ಕೃಷ್ಣನ ಪಾತ್ರವು ದಾರಿ ತಪ್ಪುವ ಅಪಾಯಗಳನ್ನು ಎಚ್ಚರಿಸುತ್ತಾ ಅವನ ಬದಲಾವಣೆಯ ಚಿತ್ರಣಗಳನ್ನು ಎಳೆ ಎಳೆಯಾಗಿ ಬಿಡಿಸುತ್ತಾ ಮರಳಿ ಜೀವನ ಸುಧಾರಿಸಿಕೊಳ್ಳುವ ನಿಟ್ಟಿನಲ್ಲಿ ಉತ್ತಮ ವ್ಯಕ್ತಿಯಾಗಲು ಅಣ್ಣ–ಅತ್ತಿಗೆ ಸಹಕಾರದ ಅವಿಭಕ್ತ ಕುಟುಂಬ ಹೇಗೆ ವಾತಾವರಣ ಕಲ್ಪಿಸಿಕೊಡುತ್ತದೆ ಎಂಬುದರ ಮಹತ್ವವನ್ನು ತಿಳಿಸುತ್ತದೆ. ಜೊತೆಗೆ ಆಸ್ತಿ, ಅಂತಸ್ತು, ಹಣವನ್ನು ಹೊರತುಪಡಿಸಿ ಗಂಡ – ಹೆಂಡತಿಯ ನಡುವೆ ಇರಬೇಕಾದ ಪ್ರೀತಿ, ಕಾಳಜಿಯ ಪ್ರಾಮುಖ್ಯತೆಯನ್ನು ವಿವರಿಸುತ್ತದೆ. “ಸಾರ್ವಜನಿಕ ಜೀವನದ ಶಕ್ತಿ ಕೇಂದ್ರಗಳ ಹಂಚಿಕೆಯಲ್ಲಿ ಸ್ತ್ರೀ–ಪುರುಷರಲ್ಲಿ ಸಮತೋಲನ ಬರಬೇಕು ಎಂಬುದು ಸ್ತ್ರೀವಾದಿ ಪ್ರಜ್ಞೆಯ ಮತ್ತೊಂದು ಮುಖ್ಯ ಕಾಳಜಿ”[1] ಎಂಬ ವಿಜಯ ದಬ್ಬೆ ಅವರ ಮಾತು ನೂರ್ ಜಹಾನ್ ರವರ ಕತೆಗಳಲ್ಲಿ ಪ್ರತಿಬಿಂಬಿತವಾಗಿದೆ.

ಮನುಷ್ಯ ಭಾವನೆಗಳನ್ನು ಗಟ್ಟಿಗೊಳಿಸುವ ಅಂತಃಕರಣದ ಪ್ರೀತಿಗೆ ಜಾತಿ, ಧರ್ಮಗಳ ಸಂಕೋಲೆಗಳಿಲ್ಲ. ಅಂತಹ ನೈಜ ಪ್ರೀತಿಯ ಮೂಲಕ ಒಂದಾಗಲು ತೀರ್ಮಾನಿಸುವ ಅನ್ನಪೂರ್ಣ ಮುಸ್ಲಿಂ ಹುಡುಗನ ಜತೆ ಮನೆಯವರ ವಿರೋಧದಲ್ಲಿ ಮದುವೆ ಆಗುತ್ತಾಳೆ. ವಿವಾಹದ ನಂತರ ಗಂಡನ ಕೆಲಸದ ಸಮಯದಲ್ಲಿ ಮನೆಯಲ್ಲಿ

ಒಬ್ಬಳೇ ಇರಲು ಬೇಸರವಾಗಿ ತನಗೆ ಅನುಭವ ಇದ್ದ ಹೋಟೆಲ್ ಉದ್ದಿಮೆ ನಡೆಸಲು ಆರಂಭಿಸುತ್ತಾಳೆ. ಸರ್ಕಾರಿ ಕೆಲಸದಲ್ಲಿದ್ದ ಗಂಡ ತನ್ನ ವರ್ಗಾವಣೆಯ ಕಾರಣಕ್ಕೆ ದೂರದ ಪ್ರದೇಶಗಳಲ್ಲಿ ವಾಸಿಸುವ ಪರಿಸ್ಥಿತಿ ಎದುರಾಗುತ್ತದೆ. ಇಂತಹ ಸಂದರ್ಭದಲ್ಲಿ ಗಂಡ–ಹೆಂಡತಿ ದೂರ ಉಳಿಯಬೇಕಾದ ಪರಿಸ್ಥಿತಿಯಲ್ಲಿ ಅವರ ಮನಸ್ಥಿತಿಗಳು, ಸಂಬಂಧದ ಅಭದ್ರತೆಗಳನ್ನು ಎದುರುಗೊಳ್ಳಲಾಗದೆ, ಮಾನಸಿಕ ಖಿನ್ನತೆಗೆ ಜಾರುವ ಅನ್ನಪೂರ್ಣಳನ್ನು ಮಾನಸಿಕ ಚಿಕಿತ್ಸೆ ಮೂಲಕ ಗುಣಮುಖಳಾಗಿಸಿ ಮರಳಿ ಸಂಸಾರದ ಸಹಜ ಪಯಣಕ್ಕೆ ಸುಧಾರಿಸುವ ಈ ಕಥೆಯ ವಸ್ತು ವಿಷಯ ಉದ್ಯೋಗ ಮತ್ತಿತರೆ ಕಾರಣಕ್ಕೆ ದೂರ ಉಳಿಯುವ ಸಾಂಸಾರಿಕ ಸಂಬಂಧಗಳ ಒಳ ಜಗತ್ತನ್ನು ಅನಾವರಣಗೊಳಿಸಿದ್ದಾರೆ. ಇಂತಹ ಪರಿಸ್ಥಿತಿಯು ಸಮಕಾಲೀನ ಸಮಾಜದಲ್ಲಿ ತೀವ್ರವಾಗುತ್ತಿರುವುದನ್ನು ಲೇಖಕಿ ಇಲ್ಲಿ ಅರ್ಥಪೂರ್ಣವಾಗಿ ಚಿತ್ರಿಸಿದ್ದಾರೆ. ಸಣ್ಣ ಕಥೆಯ ರಚನೆಯಲ್ಲಿ ವಿವರಗಳ ನಿರ್ದಿಷ್ಟತೆ, ಸಾಧನಗಳ ಮಿತವ್ಯಯ, ಪರಿಣಾಮಗಳ ಏಕಾಗ್ರತೆಯ ಮಹತ್ವವನ್ನು ಬಹಳಷ್ಟು ಜನ ಎತ್ತಿ ಹೇಳಿದ್ದಾರೆ. "ಸಣ್ಣ ಕಥೆಯ ಅವಕಾಶ ಸೀಮಿತವಾಗಿರುವುದರಿಂದ ಅದರಲ್ಲಿ ಶಬ್ದಗಳನ್ನು ದುಂದು ಮಾಡುವಂತಿಲ್ಲ"[2] ಎಂಬ ಗಿರಡ್ಡಿ ಗೋವಿಂದರಾಜುರವರ ಮಾತನ್ನು ನಿರೂಪಿಸುವಂತೆ ಲೇಖಕಿಯು ತಮ್ಮ ಕಥಾ ಸಂಕಲನದಲ್ಲಿ ಬಹಳ ಕಡಿಮೆ ಸಮಯದಲ್ಲಿ, ಪರಿಣಾಮಕಾರಿಯಾದ ವಸ್ತು ವಿಷಯದ ಮೂಲಕ ಕಥೆಗಳನ್ನು ಕಟ್ಟಿಕೊಟ್ಟಿದ್ದಾರೆ.

ನೂರ್ ಜಹಾನ್ ರವರ ಪರಿವರ್ತನೆ ಕಥಾಸಂಕಲನವು ಕಡಿಮೆ ಪಾತ್ರಗಳ ಮೂಲಕ ಪರಿಣಾಮಕಾರಿಯಾದ ವಸ್ತು ವಿಷಯಗಳನ್ನು ಒಳಗೊಂಡಿದ್ದು ಸರಳವಾಗಿ ಕಥಾ ವಸ್ತುವನ್ನು ವಿವರಿಸುವ ಇವರ ಶೈಲಿಯು ಬಹಳ ವಿಭಿನ್ನವಾಗಿದೆ. ಒಟ್ಟಾರೆ ಕಥಾವಸ್ತು ಮನುಷ್ಯ ಸಂಬಂಧಗಳ ಗಟ್ಟಿತನ, ಹಿಂಸೆ ಇಲ್ಲದ ಬದುಕಿನ ಸಿದ್ಧಾಂತವನ್ನು ಪ್ರತಿಪಾದಿಸುತ್ತದೆ.

**ಕೊನೆ ಟಿಪ್ಪಣಿಗಳು:**

1. ವಿಜಯಶ್ರೀ ಸಬರದ (ಸಂ), (2013), ಆಧುನಿಕ ಕನ್ನಡ ಮಹಿಳಾ ಸಾಹಿತ್ಯ ಚರಿತ್ರೆ: ಸಂಪುಟ–6 (ಸಾಹಿತ್ಯ ವಿಮರ್ಶೆ), ಪ್ರಸಾರಾಂಗ, ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾಲಯ, ಬಿಜಾಪುರ, ಪು.ಸಂ. 168
2. ಗಿರಡ್ಡಿ ಗೋವಿಂದರಾಜು, (2001), ಸಮಗ್ರ ವಿಮರ್ಶೆ: ಸಂಪುಟ–2, ಸ್ವಪ್ನ ಬುಕ್ ಹೌಸ್, ಬೆಂಗಳೂರು, ಪು.ಸಂ. 178

**ಪರಾಮರ್ಶನ ಗ್ರಂಥಗಳು:**


1. ಆನಂದ್ ಋಗ್ವೇದಿ, (2011), ಕಥಾ ಸ್ವರೂಪ, ರೂಪ ಪ್ರಕಾಶನ, ಮೈಸೂರು.
2. ನೂರ್ ಜಹಾನ್, (2023), ಪರಿವರ್ತನೆ, ಅಚಲಾ ಪ್ರಕಾಶನ, ನೆಲಮಂಗಲ.
3. ಕಮಲೇಶ್ವರ್ (ಸಂ), ಹೆಗಡೆ ಆರ್.ಪಿ. (ಅನು), (2007), ಕಥಾ ಸಂಸ್ಕೃತಿ: ಭಾಗ–1, ಕರ್ನಾಟಕ ಅನುವಾದ ಸಾಹಿತ್ಯ ಅಕಾಡೆಮಿ, ಬೆಂಗಳೂರು.



**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.



**About the License:**

© The Authors 2024. The text of this article is open access and licensed under a Creative Commons Attribution 4.0 International License.